

# ಶಾರ್ಮ್ ಎಲ್‌ಶೇಕ್!





ಗ್ರ್ಯಾಂಡ್ ರೊಟಾನಾ ರೆಸಾರ್ಟಿನ ಒಂದು ಪಾರ್ಶ್ವ



## ಮರುಭೂಮಿಯ ವೈಭವವನ್ನೇ ಅಡಿಯಿಂದ ಮುಡಿಯವರೆಗೆ ಹೊದ್ದ ರೆಸಾರ್ಟ್ ಅನುಭವ!

■ ಪೂರ್ಣಿಮಾ ಭಟ್

ಆಫೀಸಿನ ಬ್ರಿಟಿಷ್ ಸಹೋದ್ಯೋಗಿಗಳ ಬಾಯಲ್ಲಿ ಸದಾ ಹಾಲಿಡೇಸ್ ಇನ್ ಶಾರ್ಮ್, ಸ್ಯಾಂಡಿ ಬೀಚಸ್ ಆಫ್ ಶಾರ್ಮ್. ಪ್ರತಿ ಕ್ರಿಸ್‌ಮಸ್ ರಜೆಯಲ್ಲಿ 'ವಿಂಟರ್ ಸನ್' ಅರಸಿ ಹೊರಡುವ ಅಭ್ಯಾಸವಿದ್ದ ನಾವು ಈ ಬಾರಿ ಶಾರ್ಮ್ ಎಲ್‌ಶೇಕ್ ಹೊರಟೆವು. ಈಜಿಪ್ಟಿನಲ್ಲಿದ್ದ ಆಂತರಿಕ ರಾಜಕೀಯ ಸಮಸ್ಯೆಗಳು ನಮ್ಮ ಪ್ರವಾಸಕ್ಕೆ ಅಡ್ಡಿ ಮಾಡಬಹುದೆಂಬ ಯೋಚನೆ ಒಮ್ಮೆ ಬಂದರೂ ಶಾರ್ಮ್ ಬಗ್ಗೆ ಗೂಗಲಿಸಿದಾಗ, ಕಂಪ್ಯೂಟರ್ ಪರದೆಯ ಮೇಲೆ ಮೂಡಿದ ಅಚ್ಚುನೀಲಿ ಸಮುದ್ರ, ಮೈಲುದ್ದ ಮೈಹಾಸಿ ಮಲಗಿದ ನವಿರು ಮರಳ ದಂಡೆ...

### ಅದೊಂದು ಮಾಯಾಲೋಕ

ಗ್ರ್ಯಾಂಡ್ ರೊಟಾನಾ ಎನ್ನುವ ರೆಸಾರ್ಟಿನಲ್ಲಿ ಎಂಟು ವಾರಗಳ ಮೊದಲು ಬುಕಿಂಗ್ ಮಾಡಿದ್ದರಿಂದ ವಿಮಾನ ನಿಲ್ದಾಣದಿಂದಲೇ ರೆಸಾರ್ಟ್‌ಗೆ ನಮ್ಮನ್ನು ಕರೆದೊಯ್ಯುವ ವ್ಯವಸ್ಥೆಯಾಗಿತ್ತು. ವೈಭವವನ್ನೇ ಅಡಿಯಿಂದ ಮುಡಿಯವರೆಗೆ ಹೊದ್ದ ರೆಸಾರ್ಟ್ ಅನುಭವ ನಮಗೆ ಹೊಸತು! ಇಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ಜಗಮಗಿಸುವ ತರಹೇವಾರಿ ರೆಸಾರ್ಟುಗಳದ್ದೇ ವೈಭವ.

ಪ್ರತಿ ವರ್ಷ ಲಕ್ಷೋಪಾದಿಯಲ್ಲಿ ಇಲ್ಲಿ ಬರುವ ಪ್ರವಾಸಿಗರು ಲಕ್ಷಕ್ಕೂ ಮಿಕ್ಕ ಹಣವನ್ನೂ ತಂದು ಸುರಿಯುತ್ತಾರೆ. ಅದರಲ್ಲೂ ಶಾರ್ಮ್‌ಗೆ ಬರುವ ಪ್ರವಾಸಿಗರಲ್ಲಿ ಬ್ರಿಟಿಷರೇ ಅಧಿಕ. ಇಲ್ಲಿಯ ಜನರ ಭಾಷೆ ಪರಿಭಾಷೆಯಲ್ಲೂ 'ಬ್ರಿಟಿಷ್‌ತನ' ಹಾಸು ಹೊಕ್ಕಾಗಿದೆ. ಅಷ್ಟೇ ಏಕೆ, ಇನ್ನೂ ಸೂಕ್ಷ್ಮವಾಗಿ ಗಮನಿಸಿದರೆ ಟಾಯ್ಲೆಟ್‌ಗಳಲ್ಲಿ ಬಳಸುವ ಕಮೋಡ್‌ವಾಶ್ ಸಿಂಕ್ ಕೈ ಒರೆಸಲು ಬಳಸುವ ಟವಲ್ ವೆಂಡಿಗ್ ಮಶೀನ್ ಕೂಡಾ ಇಂಗ್ಲೆಂಡಿನಲ್ಲಿ ದೇಶದಾದ್ಯಂತ ಬಳಸುವಂತಹ ಬ್ರ್ಯಾಂಡ್.

ಇಂಗ್ಲೆಂಡಿನಲ್ಲಿ ಸಮಯವನ್ನು ಹೇಳುವಾಗ ಗಂಟೆ ನಾಲ್ಕೂವರೆಯಾದರೆ 'ಹಾಫ್ ಪಾಸ್ಟ್ ಫೋರ್'; ಆರೂಮುಕ್ಕಾಲು ಗಂಟೆಯಾದರೆ 'ಕ್ವಾರ್ಟರ್ ಟು ಸೆವೆನ್' ಎನ್ನುವುದು ವಾಡಿಕೆ. ಈ ಶಾರ್ಮ್ ಎಲ್ ಶೇಕ್‌ನಲ್ಲಿ ಇಂಗ್ಲಿಷ್

